## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

## CC No. 487/2022

PW-1

ದಿನಾಂಕ 06.08.2026 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎ. ಆರ್.ಜಿ.ಪಿ ವಕೀಲರಿಂದಃ**

ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ನಾವು 3 ಜನ ಅಣ್ಣಾತಮ್ಮಂದಿರು. 2021 ರಲ್ಲಿ ಆರೋಪಿಯು ದ್ವಿಚಕ್ರವಾಹನದ ವ್ಯವಹಾವನ್ನು ಮಹಮದ ನಜೀರ ಜೊತೆಗೆ ಮಾಡುತ್ತಿದ್ದರು. ಬಾಗಲವಾಡ ಗ್ರಾಮದ ಸುತ್ತಮುತ್ತಲಿನ ಜನರಿಗೆ ಆರೋಪಿ ಮತ್ತು ಮಹಮದ ನಜಕೀರ ನವರ ದ್ವಿಚಕ್ರವಾಹನಗಳನ್ನು ಕೊಡುತ್ತೇನೆ ಅಂತ ಹೇಳಿ ಕೊಡದೇ ಮೋಸ ಮಾಡಿದ್ದಾರೆಂದು ನನ್ನ ದೂರಿನಲ್ಲ ಬರೆಸಿದ್ದೇನೆ ಎಂದರೆ ಸರಿ. ಈ ರೀತಿಯಾಗಿ ಮೋಸ ಹೋದ ಜನರಲ್ಲಿ ಫಿರ್ಯಾದನ್ನು ಸಲ್ಲಿಸಿರುತ್ತಾರೆ. ನನ್ನ ದೂರಿನಲ್ಲಿ 2021 ರಲ್ಲಿ ನಾನು ಕೂಡ ದ್ವಚಕ್ರವಾಹನದ ವ್ಯವಹಾರ ಮಾಡುತ್ತಿದ್ದೆನು ಎಂದು ನನ್ನ ದೂರಿನಲ್ಲಿ ಬರೆಸಿದ್ದೇನೆ. ನನ್ನ ದೂರಿನಲ್ಲಿ ನಾನು ಆರೋಪಿ ಜೊತೆಗೆ ದ್ವಿವಾಹನ ವ್ಯಪಾರ ಮಡುತ್ತಿದ್ದರಲ್ಲಿ ಲಾಭ ಬಂದರಲ್ಲಿ ಒಂದು ದ್ವಿಚಕ್ರವಾಹನಕ್ಕೆ ಆರೋಪಿ ರೂ. 1 ಸಾವಿರ ಕೊಡುತ್ತಿದ್ದೆನು ಎಂದು ನನ್ನ ದೂರಿನಲ್ಲಿ ಹೇಳಿದ್ದೇನೆ. 2021 ರಲ್ಲಿ ಆರೋಪಿತರು ಜನರಿಗೆ ಯಾವ ದಿನಾಂಕ, ವರ್ಷ, ತಿಂಗಳು ದಂದು ಮೋಸ ಮಾಡಿದ್ದಾರೆಂದು ಹೇಳಲು ಬರುವುದಿಲ್ಲ, ಒಂದು ದ್ವಿಚಕ್ರವಾಹನ ಮಾರಾಟ ಮಾಡಿದರೆ ರೂ. 1000-2000 ಲಾಭ ಬರುತ್ತಿತ್ತು ಎಂದರೆ ಸರಿ. 2021 ರಲ್ಲಿ ನಾನು ಒಟ್ಟು ಎಷ್ಟು ದ್ವಿಚಕ್ರವಾಹನ ಮಾರಾಟ ಮಡಿದ್ದೇನೆಎಂದು ದಾಖಲಾತಿ ಇಟ್ಟಿದ್ದೇನೆ ಆದರೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ನನ್ನ ಹತ್ತಿರ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ದ್ವಿಚಕ್ರವಾಹನ ವ್ಯವಹಾರದಿಂದ 6 ತಿಂಗಳಿಗೆ ರೂ.25 ಸಾವಿರ ಬರಬಹುದು ಎಂದರೆ ಇರಬಹುದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಈ ನ್ಯಾಯಾಲಯದಲ್ಲಿ ಒಟ್ಟು 3 ಜನರ ಮೇಲೆ ಪ್ರಕರಣ ದಾಖಲಿಸಿದ್ದೇನೆ. ಆರೋಪಿ ಮೇಲೆ 3 ನಜೀರ ಎಂಬುವವರ ಮೇಲೆ ಒಂದು ಪ್ರಕರಣ ದಾಖಲಿಸಿದ್ದೇನೆ. ಎಲ್ಲಾ ಪ್ರಕರಣಗಳು ರೂ. 10 ಲಕ್ಷಕ್ಕೆ ಸಂಬಂದಪಟ್ಟವು ಆಗಿರುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಬಸನಗೌಡರ ಮೇಲೆ ಮಾತ್ರ ರೂ. 7 ಲಕ್ಷಕ್ಕೆ ಹಾಕಿರುತ್ತೇನೆ ಅದರ ಸಿಸಿ ನಂ. 103/2022 ಇರುತ್ತದೆ ಎಂದು ನುಡಿಯುತ್ತಾರೆ. ಸಾರ್ವಜನಿಕರು ಆರೋಪಿಯಿಂದ ಮೋಸ ಹೊದ ಹಣವನ್ನು ಅವರಿಂದ ತಿರುಗಿಸಿ ಕೊಡುವಂತೆ ಸಾರ್ವಜನಿಕರು ಕೇಳಿರುತ್ತಾರೆ. ಈ ಪ್ರಕರಣದಲ್ಲಿ ಚಕ ನಂ. 000208 ಮತ್ತು ಸಿಸಿ ನಂ. 485/2022 ರಲ್ಲಿ 015733, ಅಂದರೆ ಸಾಕ್ಷಿ ಚಕನಂಬರ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಮೋಸ ಹೋದ ಸಾರ್ವಜನಿಕರಲ್ಲಿ 70-80 ಜನರು ಇರಬಹುದು ಅದರಲ್ಲಿ 7-8 ಜನರ ಹೆಸರು ಹೇಳಬಹುದು. ಸದರಿ ಈ ಜನರು ಮೋಸ ಹೋಗಿರುವುದು ನನ್ನ ಹಣದಿಂದಲ್ಲ ಸಾರ್ವಜನಿಕರ ಹಣದಲ್ಲಿ ಎಂದರೆ ಸರಿ. ಸದರಿ ಹಣದಲ್ಲಿ ನನ್ನ ಹಣ ಸೇರಿಲ್ಲ ಎಂದರೆ ಸರಿ. ಸದರಿ ಸಾರ್ಜನಿಕರು ಹಣವನ್ನು ನನ್ನ ಕೈಯಲ್ಲಿ ಕೊಟ್ಟಿದ್ದು ಅದು ನಾನು ಆರೋಪಿಗೆ ನೀಡಿದ್ದೆನು ಎಂದು ಸಾಕ್ಷಿ ನುಡಿಯುತ್ತಾರೆ. ಒಂದು ದ್ವಿಚಕ್ರವಾಹನಕ್ಕೆ ರೂ. 50 ಸಾವಿರಗಳಂತೆ ಹೊಸ ಬೈಕನ್ನು ಕೊಡುತ್ತೇನೆಂದು ಹಣ ಸಾರ್ವಜಕರಿಂದ ಪಡೆದಿರುತ್ತಾರೆ, ನಿಪಿ-2 ಚಕ್ ಆರೋಪಿ ಸಹಿ ಹೊರತುಪಡಿಸಿ ಉಳಿದ್ದನ್ನ ನಾನೇ ಬರೆದಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಚಕನಲ್ಲಿ ತಿಂಗಳು ತಿದ್ದುಪಡಿಯಾಗಿದೆ ಎಂದರೆ ಸಾಕ್ಷಿಯು ಅದನ್ನು ಅವರೇ

ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ ಯಾವುದೇ ಚಕ್ಕನ್ನು ಕೊಡದೇ ಇದ್ದರೂ ಕೂಡ ನಾನು ಆರೋಪಿಗೆ ಬೆದರಿಗೆ ಹಾಕಿ ಅವರಿಂದ ಚಕ ಪಡೆದುಕೊಂಡು ನಾನೇ ಚಕ್ಕನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. 2021 ರಲ್ಲಿ ಕೋವಿಡ ಇರುವುರಿಂದ ಭಾರತ ದೇಶದಲ್ಲಿ ಲಾಕಡೌನ ಇರುವುದರಿಂದ ಜನರು ಹೊರಗೆ ಬರುತ್ತಿರಲಿಲ್ಲ ಸರಿಯಲ್ಲ. ಆರೋಪಿ 3 ಪ್ರಕರಣಗಳ ಚಕ್ಕಗಳನ್ನು ನನಗೆ ನೀಡಿಲ್ಲ ಆದರೂ ಕೂಡ ಬೆದರಿಹ ಒಡ್ಡಿ ಆರೋಪಿ ಇತರೆ 3 ಜನರಿಂದ ಚಕಗಳನ್ನು ಪಡದುಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

ಪ್ರ.ದ.ನ್ಯಾ.ದಂ.ಗಳು, ಮಾನ್ವಿ